ಇ) ನಿಜ, ಬೆಂಗಳೂರಿನ ಲೋಕಾಯುಕ್ತ ಅಧಿಕಾರಿಗಳ ದಿನಾಂಕ: 12.06.02ರಂದು ಬೆಂಗಳೂರಿನ ಹಣ್ಣು ಮತ್ತು ತರಕಾರಿಗಳ ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಲಾಸಿಪಾಳ್ಯಂ ಹಾಗೂ ಯಶವಂತಪುರ ತರಕಾರಿ ಉಪ ಮಾರುಕಟ್ಟೆಗಳ ಮೇಲೆ ಧಾಳಿ ಮಾಡಿ ಅಕ್ರಮವಾಗಿ ಹಣವನ್ನು ಹೊಂದಿರುವುದು ಪತ್ತೆ ಹಚ್ಚಿರುತ್ತಾರೆ.

ಈ) ಮಾನ್ಯ ಲೋಕಾಯುಕ್ತದವರು ದಿ: 29.07.02ರ ಅರೆ ಸರ್ಕಾರಿ ಪತ್ರ ಸಂಖ್ಯೆ: COMPI/UPLOK/BCD-120/02/03ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ ದಿನಾಂಕ: 12.06.02ರಂದು ಬೆಂಗಳೂರಿನ ಹಣ್ಣು ಮತ್ತು ತರಕಾರಿಗಳ (ಏ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಲಾಸಿಪಾಳ್ಯ ಮತ್ತು ಯಶವಂತಪುರ ತರಕಾರಿ ಉಪ ಮಾರುಕಟ್ಟೆಗಳಲ್ಲಿ ಅನಿರೀಕ್ಷಿತ ತನಿಖೆ ಮಾಡಿ ಅಲ್ಲಿನ ಸಿಬ್ಬಂದಿಗಳು ಅನಧಿಕೃತವಾಗಿ ಪೇಟೆ ಕಾರ್ಯಕರ್ತರಿಂದ ವಸೂಲಿ ಮಾಡಿದ ಹಣ ರೂ. 15,941-60 ಮತ್ತು ರೂ. 2,039-00ಗಳನ್ನು ಅನುಕ್ರಮವಾಗಿ ಇರುವುದನ್ನು ಪತ್ತೆ ಹಚ್ಚಿ ಸಮಿತಿಯ ಅಧಿಕಾರಿ/ ಸಿಬ್ಬಂದಿಗಳು ಕರ್ತವ್ಯವನ್ನು ನಿರ್ವಹಿಸುವಾಗ ಭ್ರಷ್ಟಚಾರದಲ್ಲಿ ತೊಡಗಿರುವುದು ವರದಿ ಮಾಡುತ್ತಾ ತನ್ಮೂಲಕ ತೀವ್ರತರವಾದ ದುರ್ನಡತೆಯಿಂದ ನಡೆದುಕೊಂಡಿರುವ ಕಾರಣ ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ನಂತರ ಈ ಎಲ್ಲಾ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕ್ರಿಮಿನಲ್ ದಾವೆಯನ್ನು ಹೂಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಉ) ಈ ವರದಿಯ ಆಧಾರದ ಮೇಲೆ 14 ಜನ ಅಧಿಕಾರಿ/ಸಿಬ್ಬಂದಿಗಳನ್ನು ಇಲಾಖಾ ವಿಚಾರಣಾ ಬಾಕಿ ಮೇರೆಗೆ ಅಮಾನತ್ತಿನಲ್ಲಿಡಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ: ಸಇ:141: ಮಾಇಸೇ: 02 ದಿನಾಂಕ: 28.11.02ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರ ಜೊತೆಗೆ ಓದಲಾದ ನಿಯಮ 13ರನ್ವಯ ಎ ಗುಂಪಿನ ಇಬ್ಬರು ಅಧಿಕಾರಿಗಳನ್ನು ಒಳಗೊಂಡಂತೆ ಒಟ್ಟು 16 ಜನ ಅಧಿಕಾರಿ/ಸಿಬ್ಬಂದಿಯ ವಿರುದ್ಧ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿರುತ್ತದೆ.

ರಾಜ್ಯದ ರೈತರು ಪಡೆದಿರುವ ಕೃಷಿ ಸಾಲವನ್ನು ಮನ್ನಾ ಮಾಡುವ ಬಗ್ಗೆ

2355(3065) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರು ಪಡೆದ ಕೃಷಿ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗಿದೆಯೇ:

ಆ) ಹಾಗಿದ್ದರೆ 2002-2003ನೆ ಸಾಲಿನಲ್ಲಿ ಮನ್ನಾ ಮಾಡಿರುವ ಸಾಲವೆಷ್ಟು? ಜಿಲ್ಲಾವಾರು ವಿವರ ನೀಡುವುದು :

ಇ) ಸಾಲ ಮನ್ನಾ ಮಾಡಿದ್ದರೂ ಸಹ ವಾಣಿಜ್ಯ ಬ್ಯಾಂಕುಗಳು ಗ್ರಾಮೀಣ ಬ್ಯಾಂಕುಗಳು ಕೃಷಿ ಹಾಗೂ ಭೂ ಬ್ಯಾಂಕುಗಳು ಸಾಲವನ್ನು ಮರುಪಾವತಿ ಮಾಡುವಂತೆ ರೈತರ ಮೇಲೆ ದೌರ್ಜನ್ಯ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಹಾಗಿದ್ದರೆ ಇಂತಹ ಬ್ಯಾಂಕಿನ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ಇಲ್ಲ

ಆ), ಇ), ಮತ್ತು ಈ) ಉದ್ಭವಿಸುವುದಿಲ್ಲ.